# ಶ್ರೀ ಸ ತ್ಯ ಬೋ ಧ ತೀ ರ್ಥಾ ಯ ನ ಮಃ



Contributed by Sri B.Ramanatha Bangalore
www.vijayadasaru.net Team member

ನೈವೇದ್ಯಗವಿಷಂ ರಾಮೇ ವೀಕ್ಷ್ಯ ತದ್ಭುಕ್ತಿಭಾಕ್ ಗುರುಃ ।
ಯೋऽದರ್ಶಯದ್ರವಿಂ ರಾತ್ರೌ ಸತ್ಯಬೋಧೋಸ್ತು ಮೇ ಮುದೇ ॥

ನೈವೇದ್ಯದಲ್ಲಿನ ವಿಷವನ್ನು ರಾಮನಲ್ಲಿ ಕಂಡು ಅದನ್ನು ಸೇವಿಸಿದ, ರಾತ್ರಿಯಲ್ಲಿ ಸೂರ್ಯನ ದರ್ಶನವನ್ನು ಮಾಡಿಸಿದ ಸತ್ಯಬೋಧತೀರ್ಥರು ನಮಗೆ ಸಂತೋಷವನ್ನುಂಟು ಮಾಡಲಿ.

( ಆ ರಾ ಧ ನೆ : ಫಾ ಲ್ಗು ಣ ಕೃ ಷ್ಣ ಪ ಕ್ಷ ಪ್ರ ತಿ ಪ ದ )

ಶ್ರೀಸತ್ಯಬೋಧೋ ನಿಜಕಾಮಧೇನುಃ ।
ಮಾಯಾತಮಃಖಂಡನ ಚಂಡ ಭಾನುಃ ॥
ದುರಂತ ಪಾಪ ಪ್ರದಹೇ ಕೃಶಾನುಃ ।
ದೇಯಾನ್ಮಮೇಷ್ಟಂ ಗುರುರಾಜಸೂನುಃ ॥

ಮಾಯಾವಾದ ಸಿದ್ಧಾಂತವೆಂಬ ತಮಸ್ಸನ್ನು ನಾಶಪಡಿಸುವಲ್ಲಿ ಪ್ರಚಂಡ ಸೂರ್ಯರಾದ, ದುರಂತ ಪಾಪಗಳನ್ನು ದಹಿಸುವಲ್ಲಿ ಬೆಂಕಿಯಾದ, ಭಕ್ತ ಜನರ ಕಾಮಧೇನುಗಳಾದ, ಶ್ರೀಸತ್ಯಪ್ರಿಯತೀರ್ಥ ಗುರುರಾಜರ ಪುತ್ರರಾದ ಸತ್ಯಬೋಧರು ನನ್ನ ಅಭೀಷ್ಟಗಳನ್ನು ನೆರವೇರಿಸಲಿ.

( ಆ ರಾ ಧ ನೆ : ಫಾ ಲ್ಗು ಣ ಕೃ ಷ್ಣ ಪ ಕ್ಷ ಪ್ರ ತಿ ಪ ದ )

೧. ರಾ ಗ - ಪಂ ತು ವ ರಾ ಳಿ : ತಾ ಳ - ಅ ಟ ತಾ ಳ

ನಾ ಧನ್ಯನಾದೆನಿಂದು ಸತ್ಯ

ಬೋಧರಾಯರ ದಿವ್ಯಪಾದಕಮಲವ ಕಂಡು । ಪ ।

ಹಿಂಗಿದುವಖಿಲದೋಷಂಗಳು ಈ ಮುನಿ
ಪುಂಗವರಂಘ್ರಿಸಂದರುಶನದಿಗಂಗಾದಿ ತೀರ್ಥ ಭು
ಜಂಗಾದ್ರಿ ಮೊದಲಾದ
ತುಂಗಯಾತ್ರೆ ಫಲ ಸಮನೆನಿಸಿತು । ೧ ।

ದಾವಮುನಿಗಳೊ ದಾವ ದೇವತೆಗಳೊ
ದಾವರುಬಲ್ಲರು ಅವರಗತಿ
ಸೇವಿಪಜನರ ಕೃಪಾವಲೋಕನದಿಂದ
ಪಾವನಮಾಡುವ ಕೋವಿದಾರ್ಯರ ಕಂಡು । ೨ ।

ಸೀತಾರಮಣ ಜಗನ್ನಾಥವಿಟ್ಠಲರೇಯ
ಭೂತಳದೊಳು ಈ ಮಹಾತ್ಮರನು
ಪ್ರೀತಿಯಿಂದಲಿ ತಾ ಸೃಜಿಸಿದ ಜಗದಿ ಪು
ನೀತರ ಮಾಡಲು ತಾ ತಕ್ಷಣದಿ । ೩ ।

೨. ರಾ ಗ - ಮ ಧ್ಯ ಮಾ ವ ತಿ : ತಾ ಳ - ಅ ಟ ತಾ ಳ

ಆವನೆದುರು ಮೂರ್ಜಗದೊಳು ಲೋಕ
ಪಾವನ ಗುರು ಸತ್ಯಬೋಧಯತೀಂದ್ರಗಿನ್ನ । ಪ ।

ಬಹು ಸುಂದರ ಸೀತಾರಘುಪತಿ ಪಾದ ।
ನಳಿನಯುಗ್ಮವ ಪೂಜಿಪ ಯತಿ, ಎಮ-
ಗೊಲಿದು ಪಾಲಿಸುವನು ಸನ್ಮತಿ, ಈ ॥

ಜಲಜಭವಾಂಡದೋಳ್ ತುಂಬಿರೆ ಕೀರುತಿ ।೧।

ಪೀಳಿಗೆ ರಾಮ ದಿಗ್ವಿಜಯರಾಮ, ಸಿರಿ ।
ಲೋಲ ವಿಟ್ಠಲ ರಾಮ ವ್ಯಾಸಕೂರುಮ, ಕಮ ।
ಲಾಲಯ ದೇವಿಯ ಸಿರಿನಾಮ, ದಿಂದ ॥
ವಾಲಗವೀಯುವ ಗುರುಸಾರ್ವಭೌಮಗೆ ।೨।

ಯತಿವರ ಸತ್ಯಪ್ರಿಯರ, ಕರ ।
ಶತಪತ್ರಭವ ಭಕ್ತರಾಧಾರ, ಮನ್- ।
ಮಥನ ಮಾರ್ಗಣ ಗೆದ್ದ ಗಂಭೀರ, ರತಿ ॥
ಪತಿ ಪಿತ ಮೋಹನ್ನವಿಟ್ಠಲ ಕಿಂಕರಗೆ ಇನ್ ।೩।

೩. ರಾ ಗ - ಭೈ ರ ವಿ : ತಾ ಳ - ಅ ಟ ತಾ ಳ

ಪ್ರತಿಗಾಣೆ ನಿಮ್ಮ ಮಹಿಮೆಗೆ ಸತ್ಯಬೋಧ ।
ಯತಿ ಕುಲವರನೆ ನಿತ್ಯ ।ಪ।

ತುತಿಸಿ ವಂದಿಸುವ ತಾವಕರೊಳಗೆಣಿಸೋ ಅ- ।
ರ್ಥಿಪ ಜನ ಚಿಂತಾಮಣಿ, ಸತ್ಕರುಣಿ ।ಅ ಪ।

ಶ್ರೀನಿವಾಸನ ಗುಣ ಸಾನುರಾಗದಲಿ ವ್ಯಾ- ।
ಖ್ಯಾನಪೇಳುವ ಕಾಲದಿ ॥
ಶ್ವಾನರೂಪದಿ ಪವಮಾನ ಜನರ ಮುಂದೆ ।
ಕಾಣಿಸಿಕೊಂಡನಂದು, ತಾ ಬಂದು ।೧।

ಬವರಗೋಸುಗ ಬಂದ ಯವನಾಧಿಪತಿ ನಿಮ್ಮ ।
ಸುವಿಚಿತ್ರ ಮಹಿಮೆ ॥
ಪ್ರವಿತತನಾಗಿ ಕಪ್ಪವ ಕೊಟ್ಟು ನಮಿಸಿದ ।
ಕವಿ ಆಲವ ವಿಭವಾ, ಸುಭವಾ ।೨।

ಇವರು ದೇವಾಂಶರೆಂದರುಪುವಗೋಸುಗ ।

ದಿವಿಜ ತರಂಗಿಣಿಯು । ಶಿವ । ನಂಗ ಭೂರುಹ
ಮೂಲ ಭಾಗದಲ್ಲಿ ಉ– ।
ದ್ಭವಿಸಿ ಕಂಗೊಳಿಸಿದಳೂ, ಕೃಪಾಳು । ೩ ।

ಸ್ವಾತಂಷ್ಠ ಮುಖ್ಯಪ್ರಾಣಾಂತರಾತ್ಮಕ ಭಗ– ।
ವಂತ ನಂಘ್ರಿಕಮಲಾ ॥
ಸಂತತ ಸರ್ವತ್ರ ಚಿಂತಿಸುತಿಪ್ಪ ಮ– ।
ಹಂತರಿಗೇ ನಚ್ಚರಾ ವಿಚಾರಾ । ೪ ।

ಮರುತ ಮತಾಬ್ಧಿ ಚಂದಿರ ಚಾರು ಚರಿತ ಭೂ ।
ಸುರವರ ಸನ್ನುತನೇ ॥
ಪರಮ ಪುರುಷ ಜಗನ್ನಾಥವಿಟ್ಠಲ ನಿಮ್ಮ ।
ಪರಿಪರಿ ಮಹಿಮೆ ಎಲ್ಲಾ ತಾ ಬಲ್ಲಾ । ೫ ।

೪. ರಾ ಗ – ಮೋ ಹ ನ : ತಾ ಳ – ಝ ಂ ಪೆ ತಾ ಳ

ಸತ್ಯಬೋಧರು ಭಕ್ತರ ಪ್ರಿಯರು । ಪ ।

ಅಪಾರಮಹಿಮರು ತಾಪ ಬಡುವ ಜನರ ।
ಕೋಪವಿಲ್ಲದೆ ಕಾಪಾಡುವರು । ೧ ।

ರಾಗಾದಿಂದನುಪಮ ಭಾಗೀರಥಿಯ ಕಂಡು !
ಆಗಮವ ತೋರಿದ ಯೋಗಿ ವರ್ಯರ । ೨ ।

ಸವಣೂರಾಪುರದಲಿ ಹರಿಯ ಭಕ್ತರನ್ನು ।
ಪರಿಪಾಲಿಸುವ ಭೀಮೇಶಕೃಷ್ಣನ ಪ್ರಿಯರು । ೩ ।

೫. ರಾ ಗ – ಪೂ ರ್ವಿ : ತಾ ಳ – ರೂ ಪ ಕ ತಾ ಳ

ವಾದಿವಾರಣ ಪಂಚವದನ ಸತ್ಯಬೋಧ ಸದ್ಗುರು ಜಿತಮದನ। ಪ ।

ಬಾದರಾಯಣ ರಾಮ ವೈದೇಹಿ ಚರಣಾಬ್ಜಾ- ।
ರಾಧಕನೆನಿಪೆ ಸುಮೋದವಿತ್ತು ಕಾಯಬೇಕೊ ।ಅ ಪ।

ಶ್ರೀಮಧ್ವ ವಾರಿಧಿ ಸೋಮ ದ್ವಿಜೋತ್ತಮ ಸದ್ಗುಣ ಗಣಧಾಮ ।
ಕಾಮಿತಜನಕಲ್ಪ ಭೂಮಿಜ ವಿಬುಧಸು-
ಪ್ರೇಮಿ ಸಂಯಮಿ ಕುಲೋದ್ಧಾಮ ದಯಾಂಬುಧೇ ॥

ಗೋಮನಿ ವಲ್ಲಭನ ಪದಯುಗ ।
ತಾಮರಸವನು ದಿನದಿ ಬಿಡದಲೆ ।
ನೇಮದಿಂದಲಿ ಭಜಿಸುತಿಪ್ಪ ಮಹಾಮಹಿಮ ನಿನ್ನ ತುತಿಸ ಬಲ್ಲನೆ ।೧।

ದೀನಜನರ ಬಂಧು ನಿನ್ನ । ಪದ-
ಪಾದಕಾ ನಮಿಸುವೆ ಸುಪ್ರಸನ್ನ । ದಾನವಮಾನಗಳಿಂದ
ಜ್ಞಾನಿ ಜನರ್ಗೆ ಆನಂದಪಡಿಸುತ್ತ ಸಾನುರಾಗದಿ ನಿತ್ಯ ॥
ಶ್ರೀನಿಕೇತನನ ಪರಮ ಕಾರು ।
ಣ್ಯಾ ನಿವಾಸಸ್ಥಾನ ನೆನಿಪ ಮಹಾನುಭಾವ ।
ಭವತ್ಪದಾಂಭೋಜಾಣುಗರ ಅಣುವೆಂದು ಪಾಲಿಸು ।೨।

ಸತ್ಯಪ್ರಿಯರ ಕರಕಮಲಾ ।
ಜಾತ ನಿತ್ಯ ನಿರ್ಜಿತ ಘೋರಕಮಲಾ ।
ಚಿತ್ತ ಜಪಿತ ಜಗನ್ನಾಥವಿಟ್ಠಲನ್ನ ।
ಚಿತ್ತಾನು ವೃತ್ತಿಗಳಂತೆ ಸಂತೈಸುತ್ತಾ ।
ಅತ್ಯಧಿಕ ಸಂತೋಷದಲಿ ಪ್ರತ್ಯರ್ಥಿಗಳಿಗುತ್ತರಿಸಿ ಮಿಗೆ ಪುರು।
ಷೋತ್ತಮನೆ ಪರನೆಂದು ಡಂಗುರವೆತ್ತಿ ಹೊಯ್ಸಿ ಕೃತಾರ್ಥನೆನಿಸಿದೆ। ೩ ।

೬. ರಾ ಗ - ಸಾ ವೇ ರಿ : ತಾ ಳ - ಆ ದಿ ತಾ ಳ

ನುತಿಸಿ ಬೇಡುವೆ ವರವ ಕರವ ಮುಗಿದು
ಸತತ ಲಕುಮೀಪತಿಯ ಭಕುತಿ ಒಂದೇ ಇರಲಿ ।ಪ।

ಮದನಶರತಿಮಿರಾರ್ಕ ಸ್ವಜನವಾರ್ಧಿಗೆ ಪೂರ್ಣ-

ವಿಧು ಮಂಗಳಗಾತ್ರ ಬಲು ಸುಲಭ
ಬುಧನಾಗಿ ಶಿಷ್ಯರ್ಗೆ ಸುಧೆಯ ಪೇಳುವ ಮೌನಿ
ಎದುರಿಲ್ಲ ನಿಮಗೆಲ್ಲಿ ಗುರುವೆ ಸುರತರುವೆ ।೧।

ಅಂದವಾದ ಕಾವ್ಯ ಸಾಮರ್ಥ್ಯಧೀರುವೆ
ಮಂದಹಾಸದಿ ನೋಳ್ಪ ಭಕುತಜನರ
ಒಂದೊಂದು ಪದಾರ್ಥ ಪಿಡಿವ ಗಂಟಲ ರಾಹು
ನಂದತೀರ್ಥರಮತಕೆ ಕೇತುಸ್ಥಾನೀಯ ನಿತ್ಯ ।೨।

ವಾದಿಗಳೆದೆಯಶೂಲ ಸತ್ಯಪ್ರಿಯಕರಜಾತ
ಸಾಧುಸಜ್ಜನಗೇಯ ಸತ್ಯಬೋಧ
ಮೋದಿ ಹಯವದನರಾಮ ವಿಜಯವಿಟ್ಠಲ
ನಾದಿದೈವವೆಂದು ಎಣಿಸುವ ಜಪಶೀಲಾ ।೩।

೭. ರಾ ಗ – ಮೋ ಹ ನ : ತಾ ಳ – ಅ ಟ ತಾ ಳ

ಮಾರಮದನಘನಸಮೀರ ಮಧ್ವಮತೋ–
ದ್ಧಾರ ಶುಭಗುಣಸಾಗರಧೀರ
ಗುರು ಸತ್ಯಬೋಧಾರ್ಯ ಹರಿಕರುಣದಲಿ
ಪರವರ್ಗವ ಗೆಲಿದು ಧಾರುಣಿಯೊಳು ಮೆರೆದೆ ।ಪ।

ಮುನಿನಿಮ್ಮ ಮಹಿಮೆಯನು ತಿಳಿಯದಲೆ ದಂಡೆತ್ತಿ
ಮನಸಿಜನು ಬರಲು ಕೇಳಿ–ತಾಳಿ
ಘನಮಹಿಮ ಸತ್ಯಪ್ರಿಯಗುರುಕರುಣದೃಢಕವಚ
ವನು ಧರಿಸಿ ಧೀರರಾಗಿ–ಸಾಗಿ
ಮನೋಜಯ ಅಷ್ಟಾಂಗಯೋಗಸಾಧನ ಬಲದಿ
ಮಣಿಯದಲೆ ಮಲೆತು–ಕಲೆತು
ಪ್ರಣವಾದಿ ಮಂತ್ರಪ್ರತಿಪಾದ್ಯಮೂರ್ತಿಗಳ ।೧।

ಕುಸುಮಾಸ್ತ್ರನಂಗನಾಗಲು ಉಡುಸಹಿತ ಹಿಮಗು
ವೆಸಗಿ ನಭಕೇರಿನಿಂದ–ಮಂದ

ಸೊಶನ ಮೆಲ್ಲನೆ ಜರಿದ ವನಕೆ ಪೋಗಿ ವಸಂತ
ಝಷ ಮಕರ ಜಲದೊಡಗೆ–ನಡುಗೆ
ಎಸೆವ ಶುಕಪಿಕಸಮೂಹಗಳು ಭಯಪಟ್ಟು ಬಲು
ದಶದಿಶೆಗೆ ಓಡಿಪೋಗೆ–ಕೂಗೆ
ಹೊಸಮಲ್ಲಿಕಾದಿ ಕುಟ್ಮಗಳಂಜಿ ಬಾಯಿಬಿಡಲು
ಯಶೋನಿಧಿಯೆ ತವಕೀರ್ತಿ ಪಸರಿಸಿತು ಭುವನದಲಿ ।೨।

ಮಾರನಪಜಯ ಕಂಡು ಕ್ರೋಧಾದಿವರ್ಗಗಳು
ದೂರದಲಿ ನಿಂದು ನಮಿಸೆ–ಗಮಿಸೆ
ಧೀರ ನಿಮ್ಮ ಪಾಂಡಿತ್ಯ ಕಂಡು ತಲೆಬಾಗಿ ಫಣಿ
ಧಾರುಣಿ ತಳಕೆ ನಡೆದ–ವಿಬುಧ
ವೀರ ಕರ್ಣನು ನಿಮ್ಮ ಮೀರ್ದತ್ಯಾಗವ ನೋಡಿ
ಸೇರ್ದ ರವಿಮಂಡಲವನು–ಅವನು
ಶ್ರೀರಾಮವ್ಯಾಸ ಗೋಪಾಲವಿಟ್ಠಲನಂಘ್ರಿ
ಆರಾಧಕರೆ ತಮ್ಮ ಚಾರುಚರಣಕೆ ನಮಿಪೆ ।೩।

ಲ. ರಾ ಗ – ಜ ಂ ಜೂ ಟಿ : ತಾ ಳ – ಅ ಟ ತಾ ಳ

ವಂದಿಪೆ ಗುಣಸಾಂದ್ರರಾ । ನಾನು
ವಂದಿಪೆ ವರ ಗುಣಸಾಂದ್ರರಾ ।ಪ।

ವಂದಿಪೆ ವರಗುಣಸಾಂದ್ರ ಶಿಖಾಮಣಿ
ಸುಂದರ ಗುರು ಸತ್ಯಬೋಧರಾ ।ಅ ಪ ।

ಜಪತಪ ವ್ಯಾಖ್ಯಾನ ಅಪರಿಮಿತ ಜ್ಞಾನ
ತಪೋನಿಧಿ ಗುರು ಸತ್ಯಬೋಧರಾ ।೧।

ಅದ್ವೈತಶಾಸ್ತ್ರದ ಸದ್ದಡಗಿಸಿದಂಥಾ
ಮಧ್ವರಾಯರ ಮುಖ್ಯಶಿಷ್ಯರಾ ।೨।

ಕಾಮಿತಫಲವೀವ ಸ್ವಾಮಿ ಶ್ರೀರಘುಪತಿಯ

ಪ್ರೇಮದಿ ಭಜಿಸುವ ಗುರುಗಳಾ ।೩।

೯. ರಾ ಗ – ಕ ಪಾ ಲಿ : ತಾ ಳ – ಝ ಂ ಪೆ ತಾ ಳ

ಭಕುತಿ ಪಾಲಿಸೋ ವಿರಕ್ತಿ ಕರುಣಿಸೋ ।ಪ।

ಸತ್ಯಪ್ರಿಯತೀರ್ಥ ಕರಜ ಸತ್ಯಬೋಧ ಗುರುವರೇಣ್ಯ ।ಅ ಪ।

ಪೃಥ್ವಿಜಾವಲ್ಲಭನ ಪಾದ । ನಿತ್ಯ ಪೂಜಿಸುತಲಿ ಜಗದಿ
ಮತ್ತಮಾಯಿ ಗಜಕುಲ । ಪಂಚವಕ್ತ್ರರೆನಿಸಿ ಮೆರೆದ ಗುರುವೆ ।೧।

ನಂದತೀರ್ಥಮತ ಪಯೋಬ್ಧಿ । ಚಂದ್ರ ಸದೃಶರೆನಿಸಿ ಸತತ
ನಂದಶಾಸ್ತ್ರ ಬೋಧಿಸಿ ಬುಧ । ವೃಂದಕೆ ಆನಂದ ಗರೆದ ।೨।

ಇರುಳುಕಾಲದಲ್ಲಿ ನಭದಿ । ತರಣಿ ಬಿಂಬ ತೋರಿದಂಥ
ಪರಮ ಮಹಿಮ ನಿಮ್ಮಯ ಶುಭ । ಚರಣ ಸ್ಮರಣೆ ಕರುಣಿಸೆನಗೆ ।೩।

ಕೋನೇರಿಯಾಚಾರ್ಯರು ನಿಮ್ಮ । ಕಾಣುತ ತೀರ್ಥವನು ಕೊಂಡು
ವಾನರ ದೇಹವನು ತ್ಯಜಿಸಿ ಸು । ಸ್ಥಾನಗತಿಯ ಪಡೆದರು ಜವ ।೪।

ಶರಣಜನರ ಪೊರೆವ ಕಾರ್ಪರ । ನರಹರಿ ಪದದಿಂದ ಜನಿತ
ಸುರನದಿ ನಿಮ್ಮಯ ಬಳಿಗೆ ಬಂ। ದಿರುವೆ ಮಹಿಮೆ ತುತಿಸಲೆಂದು ।೫।

೧೦. ರಾ ಗ – ಶಂ ಕ ರಾ ಭ ರ ಣ : ತಾ ಳ – ಅ ಟ ತಾ ಳ

ನೋಡಿದೇ – ಗುರುವರರ ನಾ ನೋಡಿದೇ ।ಪ।

ನೋಡಿ ಗುರುಗಳ ಪಾದ – ಈಡಾಡಿ ಶಿರವನು
ಬೇಡೆ ಭಕ್ತಿಜ್ಞಾನ – ನೀಡುತ ಪೊರೆವರ ।ಅ ಪ।

ಹೇಮಕಾಮಿನಿಯನೆ ಜರಿದೂ – ಪ್ರಿಯರ
ಪ್ರೇಮದ ಚರಣಗಳ್ಪಿಡಿದೂ – ಬಲು
ನೇಮದಲ್ಯತಿಯಾಗಿ ಮೆರೆದೂ–ಮಾಯಿ
ಗೋಮಾಯಿಗಳನೆಲ್ಲ ಜರಿದೂ – ಆಹಾ ॥
ರಾಮಚಂದ್ರರ ಪಾದ । ತಾಮರಸವ ಧರಿಸಿ
ಭೂಮಿಯೊಳಗೆ ಚರಿಸಿ । ಮೆರೆಸಿದ ಗುರುಗಳ । ೧ ।

ಶೇಷರೂಪಿಲಿ ಬಂದ ಹರಿಯಾ–ಗುಪ್ತ
ಭಾಷೆಯ ಕೇಳುತ್ತ ಗೃಹವಾ–ಪೊಕ್ಕು
ಮೀಸಲೆಂದೆನಿಸಿದ ಧನವಾ – ಲೇಸಾ
ಯಾಸಿಲ್ಲದೆ ತೆಗಿಸ್ಯದನಾ – ಆಹಾ ॥
ಏಸೇಸು ಜನುಮದಿ । ಪೋಷಿಸಿರೂವನ
ಶ್ರೀಶಗರ್ಪಿಸುತಲಿ । ತೋಷವಪಡಿಸಿದರೆ । ೨ ।

ಮೋದದಿ ಹರಿಪರನೆಂದೂ – ಪೂರ್ಣ
ಬೋಧರೆ ಗತಿ ನಮಗೆಂದೂ – ಮಾಯ
ವಾದಗಳನೆ ಬಿಡಿರೆಂದೂ – ಸತ್ಯ
ಬೋಧರೆ ಅರುಹುತ ನಿಂದೂ – ಆಹಾ ॥
ವೇದವಿನುತ ಗುರುಗೋವಿಂದವಿಟ್ಠಲನ
ಪಾದಪಿಡಿದು ಸವಣೂರಿನಲಿ ಮೆರೆದವರ । ೩ ।

೧೧. ರಾ ಗ – ಕ ಲಾ ವ ತಿ : ತಾ ಳ

ನಂಬಿದೆ ನಿನ್ನ । ಶ್ರೀ ಗುರು ಪೂರ್ಣ ।
ಬೆಂಬಿಡದಲೆ ನೀ । ಕಾಯ ಬೇಕೆನ್ನ । ಪ ।

ಸತ್ಯ ಪ್ರಿಯರತಿ । ಪ್ರೀತ ಕುಮಾರ ।
ಸತ್ಯ ಸನಾತನೀ । ಸತ್ಯಬೋಧ ಗುರು । ೧ ।

ನಿತ್ಯ ಸತ್ಯವ್ರತ । ಭೃತ್ಯ ಮನೋರಥ ।
ಅತ್ಯಂತ್ವರುಷದಿ । ಇತ್ತ ಸನ್ಮತ ಯತಿ । ೨ ।

ಶ್ರೀದವಿಟ್ಠಲನ । ಪಾದ ಮಧುಪ ನಿತ್ಯ ।
ಸಾಧುವರ್ಯ ಕೃಪಾ । ಸಾಗರ ಸತತ । ೩ ।

೧೨. ರಾ ಗ – : ತಾ ಳ –

ಸತ್ಯಬೋಧರಾಯಾ ಪಾಲಿಸೋ ಭೃತ್ಯಜನರ ಪ್ರಿಯಾ
ನಿತ್ಯದಲಿ ತುತಿಪೆ ಮನದೊಳು
ಚಿತ್ತಜಪಿತನಲಿ ಉತ್ತಮ ಮತಿಕೊಡು । ಪ ।

ಸೂರಿ ಜನರ ವಂದ್ಯ । ಈ ಭವವಾರಿಧಿಯೊಳು ನೊಂದೆ ।
ಆರಾತ ಜನರಿಗೆ ತೋರಿಸಿ ಹರಿಯನು ।
ಕೀರುತಿಯಲಿ ಸುವಾರುತೆ ಪೇಳಿಸೊ । ೧ ।

ಅಪರಾತ್ರಿಯೊಳು ಅನ್ನ ಉಣುವ ವಿಪರೀತವೇನೆಂದು
ಅಪಹಾಸ ಮಾಡಿದವರಿಗಾಕ್ಷಣ ।
ತಪನ ತೋರಿದಾ ವಿಪರೀತ ಮಹಿಮನೆ । ೨ ।

ಗಂಗೆಗೆ ನೀ ಪೋಗಿ ತಾ ಉತ್ತುಂಗಮನಿರೆ ಯೋಗಿ ।
ಅಂಗನೆ ತಾನತಿಶಯದಿ ತೆರಳಿ ಬಂದು ।
ಮಂಗಳಸ್ನಾನವ ಮಾಡಿಸಿದಳು ಅಂದು । ೩ ।

ಸಾರ್ವನಾ ನಿನ್ನ ನೀ ಇನ್ನು ದೂರ ನೋಡದೆ ಎನ್ನ
ಸಾರಿಗರಿದು ಶ್ರೀವೆಂಕಟವಿಟ್ಠಲನ ।
ಚರಣಗಳ ತೋರು ರಕ್ಷಿಸುತ । ೪ ।

೧೩. ರಾ ಗ – : ತಾ ಳ –

ನಿಂದಿಸೋರಿಗೆ ನಿಂದೆಯನು ಕೊಡುವಾ
ಕೊನೆ ಕಾಮರಿಗೆ ಕೊನೆಯನು ಕೊಡುವಾ
ಘನ ಮಹಿಮಾ ನಮ್ಮ ಸತ್ಯಬೋಧಗುರು

ವನುದಿನ ನೆನೆಯಲಭೀಷ್ಟವ ಕೊಡುವಾ । ಪ ।

ರಾಮದೇವಾರ್ಚನೆ ನೇಮದಿಂದಲಿ ಗೈದು
ಕಾಮಿತ ಫಲಪ್ರದ ಬಲವೈಯ್ದಿದಾ
ಶೀಮಿಶೀಮಿಯೊಳು ಕಾಮನೈಯ್ಯನ ಜನ
ಕಾಮನೆಪ್ರದಾನೆಂಬುದೆ ಸಾರಿದಾ
ಧೀಮಾನ್ ಶ್ರೀಮಾನ್ ಕಾಮಿತೇಷ್ಟದಾ
ಕಾಮನೆಂದು ತಾ ಪೊಗಳಿಸಿದಾ
ವಾಮದೇವಗುರು ರಾಮಭಕುತನೆಂದು
ಭೂಮಿಯೊಳ್ಡಂಗುರ ಹೊಡ್ಸುವಾ । ೧ ।

ತತ್ವ ತಿಳಿದು ನೋಡಿ ಸತ್ಯಸತ್ಯ ಹರಿ
ಮತ್ತವನಿಗೆ ಭೃತ್ಯವಾದ ಸೂನು
ಉತ್ತಮರೆಲ್ಲರು ಸತ್ಸಮಯವಂತೆ
ಸತ್ಯಪ್ರಮಾಣವ ಪೇಳಿದನು
ಸತ್ಯಬೋಧ ರವಿ ಮಿಥ್ಯಾಗತ್ತಲೆಗೆ ತಾ
ಕತ್ತರಿಯೆಂದರುಹಿದನು ಸತ್ಯಬೋಧನೆಯನು
ಸತ್ವರಿಂಗೆ ಮಾಡಿ ಮತ್ತವರುದ್ಧಾರ ಮಾಡಿದನು । ೨ ।

ವರಸದ್ಗುಣಗಣ ನಿಲಯ ನೆನಿಸಿ ತಾ
ವರ ಶಿಷ್ಟಾನ್ವಿತ ಮೇಣ್ ವಂದ್ಯನಾದ
ಶಿರಿವರ ಪಾದಾನುಗ್ರಹ ಪಡೆದು ತಾ
ಹರಿಜನಾರ್ತಿತಯ ಛೇದಿಸಿದಾ
ದುರಿತ ತಮರಾಶಿಗಗ್ನಿಯೆನಿಸಿದಾ
ಶರಣರ ಸಂಘ ಬೂದಿಗೈದಾ
ನರಸಿಂಹವಿಟ್ಠಲನ ಕರಣವ ಪಡೆದು ತಾ
ಗುರುವರ ವರಪ್ರದನೆನಿಸಿದಾ । ೩ ।

೧೪. ರಾ ಗ – : ತಾ ಳ –

ಕುರುಡನಿಗೆ ಕರವಿತ್ತು ಪೈಪಿಡಿದು ಕಾಯೋ । ಪ ।

ದೃಢಮತಿಯಿತ್ತು ತವ ಪಾದದಲಿ ।ಅ ಪ।

ಗರುಡಾರಿ ಭೂಷಣನ ಚರಣದಡಿಯೊಳಗಿದ್ದು
ಘನತಪವ ಗೈವ ಮಹತ ಪರಿಯೊ ।೧।

ಬೋಧತೀರ್ಥಾರ್ಯರ ಮತಕನುಸರಿಸಿ
ಸದ್ಭಕುತ ಜನಕೆ ಭೇದಗಳ ಬೋಧಿಸುತ
ಸತ್ಯಬೋಧಾಖ್ಯಯತೀ ಧರೆಯೊಳಗಮರವೇ ।೨।

ಮ್ಲೇಚಪುರದಲಿ ಕುಳಿತು ಸಂಚಿತಾಗಾಮಿಗಳ
ಕೊಂಚಮಾಡುತ ನಿಷ್ಕಿಂಚಿನರ ಪ್ರಿಯಾ
ತಂದೆವರದಗೋಪಾಲವಿಟ್ಠಲನ
ಮಂಚ ಪದನಿಂದ ಪೋಷಿತನಾದ ಪ್ರಭುವೇ ।೩।

೧೫. ರಾ ಗ – : ತಾ ಳ –
ಬೋಧರ ನೋಡಿರೈ ಸತ್ಯಬೋಧರ ಪಾಡಿರೈ ।ಪ।

ಮೇದಿನಿಯೊಳು ಬುಧಜನ ಉಡುವೃಂದಕೆ ಚಂದ್ರಾ ಸದ್ಗುಣ ಸಾಂದ್ರಾ ।ಅ ಪ।

ತಾಮರಂಧಂತಮದಿಯಟ್ಟಿದಾ ಜವನೋಧರ್ಮ ಪ್ರಸ್ರವನೋ
ಕಾಮನ್ನೈಯ್ಯನ ಗುಣ ಪಾರಾಯಣರತ ಧ್ರುವನೊ ಯತಿ ಪುಂಗವನೊ
ರಾಮಾರ್ಚನ ಕೃತ ಪೂತಹಸ್ತ ಪಲ್ಲವನೊ ವಿದ್ವದ್ಧವನೋ
ಕಾಮಿತೇಷ್ಟಪ್ರದ ಚಿಂತಾಮಣಿಗುಣಯುತನೋ ಜತಸನ್ನುತನೊ ।೧।

ಯತಿಮಣಿಮಾಲೆಯೊಳತಿ ಮಿನುಗುವ ಪಚ್ಚದ್ಯುತಿಯೋ ಸಜ್ಜನ
ಗತಿಯೋ ಶ್ರುತಿತತಿನುತ ಶ್ರೀಪತಿಗುಣ ಸುಧಾ ಸಧೃತಿಯೋ ಕುನರೂಪ
ಹತಿಯೋ ಯತಿಕುಲರತ್ನಾಕರ ಸಂಜನೀತ ಪ್ರೋನ್ನತಿಯೋ ಕವಿಜನ
ನುತಿಯೊ ಮಿತಿಮೀರಿ ಕೂಡಿಹ ಭಗವದ್ಭಕ್ತರ ಹಿತವೊ ಹರಿಸಮ್ಮತವೋ ।೨।

ನಿರುಪಮ ಸುಖತೀರ್ಥವಂಶದಲ್ಲಿ ವರ್ಧನವೋ ಹರಿಜನ ಧನವೋ
ಶರಣರ ದುರಿತಗಳಿರದೆ ಕಳೆವ ಹಿತತನುವೋ ಅಭಯ ಸುಮನವೋ
ಸರುವ ರಾತ್ರಿಯೊಳು ರವಿಯ ತೋರ್ದ ತಪಧನವೋ ಮದಮರ್ದನವೋ
ನಿರುತದಿ ನರಸಿಂಹವಿಟ್ಠಲನ ನೆನೆಯುವ ಯಶವೋ ದಾಸರ ವಶವೋ । ೩ ।

೧೬. ರಾ ಗ - ತೋ ಡಿ : ತಾ ಳ - ರೂ ಪ ಕ ತಾ ಳ

ನೋಡಿ ಧನ್ಯನಾದೆ ಸತ್ಯಬೋಧರಾಯಾ ।
ಬೇಡಿದೊರವ ನೀಡುವ ಪರಮದಯಾಕರನಾ । ಪ ।

ರಘುರಾಮನ ಸೇವೆಯನ್ನು ಮಾಡ್ದ ಮಹಿಮನಾ ।
ಪೊಗಳಿ ಪಾಡುವರಿಗೆ ಮುಕ್ತಿ ಪಥವ ತೋರ್ಪನಾ । ೧ ।

ವಿಷವ ಮೆದ್ದು ಹರಿಕೃಪೆಯಿಂ ಜೀರ್ಣಿಸಿದವನಾ ।
ಆಶೀರ್ವದಿಸಿ ಖಂಡೆರಾಯನುದ್ಧರಿಸಿದವನಾ । ೨ ।

ವರಭೂಸುರರಾಡಿದ ನಿಂದೆಯನು ನುಡಿಯನಾ ।
ತ್ವರದಿ ಕೇಳಿ ತೋರಿದನು ಇವನು ಸೂರ್ಯನಾ । ೩ ।

ಕೊಡು ಭಕುತಿಯ ನಿನ್ನೊಳು ಗುರುಸತ್ಯಬೋಧನೇ ।
ಬಿಡಿಸೋ ನಿನ್ನಡಿಗೆ ಕಟ್ಟಿಕೊಳ್ವೆ ಕೊರಳನೇ । ೪ ।

ಹರಿವಾಯುಗಳಲ್ಲಿ ಕೊಡು ನೀ ನಿಜಭಕುತಿಯನೇ ।
ವರದ ಶ್ರೀಹನುಮೇಶವಿಟ್ಠಲನಡಿ ಸೇವಕನೇ । ೫ ।

೧೭. ರಾ ಗ - ಕ ವಾ ಲಿ : ತಾ ಳ - ಝಂ ಪೆ ತಾ ಳ

ಭಕುತಿ ಪಾಲಿಸೊ । ವಿರಕ್ತಿ ಕರುಣಿಸೋ । ಪ ।

ಸತ್ಯಪ್ರಿಯತೀರ್ಥ ಕರಜ ।
ಸತ್ಯಬೋಧ ಗುರು ವರೇಣ್ಯ । ಅ ಪ ।

ಪೃಥ್ವಿಜಾ ವಲ್ಲಭನ ಪಾದ ।
ನಿತ್ಯ ಪೂಜಿಸುತಲಿ ಜಗದಿ ॥
ಮತ್ತಮಾಯಿ ಗಜ ಕುಲ ಪಂಚ ।
ವಕ್ತ್ರರೆನಿಸಿ ಮೆರೆದೆ ಗುರುವೆ ।೧।

ನಂದತೀರ್ಥ ಮತ ಪಯೋಬ್ಧಿ ।
ಚಂದ್ರ ಸದೃಶರೆನಿಸಿ ಸತತ ॥
ನಂದ ಶಾಸ್ತ್ರ ಬೋಧಿಸಿ ಬುಧ ।
ವೃಂದಕೆ ಆನಂದ ಗರೆದಿ ।೨।

ಇರಳು ಕಾಲದಲ್ಲಿನಭದಿ ।
ತರಣಿ ಬಿಂಬ ತೋರಿದಂಥ ॥
ಪರಮ ಮಹಿಮ ನಿಮ್ಮಯ ಶುಭ ।
ಚರಣ ಸ್ಮರಣೆ ಕರುಣಿಸೆನಗೆ ।೩।

ಕೋನೇರಿಯಾಚಾರ್ಯರು ನಿಮ ।
ಕಾಣುತ ತೀರ್ಥವನು ಕೊಂಡು ॥
ವಾನರ ದೇಹವನು ತ್ಯಜಿಸಿ ಸು ।
ಸ್ಥಾನ ಗತಿಯ ಪಡೆದರು ಜವ ।೪।

ಶರಣು ಜನರ ಪೊರೆವ ಕಾರ್ಪರ ।
ನರಹರಿ ಪದದಿಂದ ಜನಿತ ॥
ಸುರನದಿ ನಿಮ್ಮಯ ಬಳಿಗೆ ಬಂ ।
ದಿರುವ ಮಹಿಮೆ ತುತಿಸಲೆಂದು ।೫।

೧೮. ರಾ ಗ – ಸಾ ರ ಂ ಗ : ತಾ ಳ – ರೂ ಪ ಕ ತಾ ಳ

ಶ್ರೀಸತ್ಯಬೋಧ ಸದ್ಗುರುವರನ ಮಹಿಮೆ ।
ಸ್ಮರಿಸುವ ನರನೇವೆ ಧನ್ಯ ॥
ಮರುತ್ಯನಯ್ಯನಂಘ್ರಿ ಸ್ಥಿರವಾಗಿ ಕಾಣುವ ಸಟಿಯಲ್ಲ ।

ವೀನುಡಿ ಮಾನ್ಯಾ ।ಪ।

ಧರೆಯಲಿ ರಾಯಚೂರ ಹರಿಯಾಚಾರ್ಯರ ಪತ್ನಿ ।
ಅರಳಮ್ಮನವರು ತಾವಂದು । ಪರಿಪರಿ ವ್ರತದಿಂದ ನರಹರಿ ಸೇವೆಯ ।
ಕರಿಸಿದರು ವತ್ಸರೊಂದು । ಪರಿಪೂರ್ಣ ಫಲಕೊಟ್ಟೆನೆಂದು ಸಂಭ್ರಮದಿಂದಿರೆ
ವರಪುತ್ರ ಜನಿಸಿದನಂದು ॥
ಚರಿಸಿ ಯತಿಯಾಗಿ ನೀವ್ ಸ್ವರಣಪುರದೋಳು ।
ಪೊರೆಯುತ್ತ ಭಕುತರ ನಿಂದು ।೧।

ಪರಮ ಪಾತಕಿ ಪಾಚಕ ಪಾಕದೊಳು ತಾನು ।
ಗರಳ ಮಿಶ್ರವ ಮಾಡಿರಲು ॥
ಹರಿಗೆ ನೈವೇದ್ಯ ಕೊಡಲಾಗಿ ತಿಳಿಯೆ ಮೂರುತಿಯ ಕಂಡವು ಕಪ್ಪಾಗಿರಲು
ಕರೆದು ಕೇಳಿ ಗರಲ ಸತ್ಯವೆನ್ನುತ ಉದ್ಧರಿಸೆಂದು ಚರಣಕ್ಕೆರಗಲು ।
ಹರಿಗರ್ಪಿಸಿರುವ ಕಾರಣದಿ ನೈವೇದ್ಯವ ಹರುಷದಿ ತಾವೇ ಭುಂಜಿಸಲು ।೨।

ವಿಷದ ನಿಮಿತ್ಯದಿ ನಿಶಿ ಭುಂಜಿಸುತಿರಲು ವಿಷಮ ಜನರು ನಿಂದಿಸಿದರು ।
ಶಶಿಯನ್ನು ಬಿಸಜಸದಿನಂತೆ ತೋರಿಸೆ ವಶರಾಗಿ ವಂದಿಸಲ್ಕವರು ॥
ಅಸಮ ಮಹಿಮೆಗಳ ಅತಿಶಯ ತೋರಿಸಿ ಯಶಸು ಜಗದಿ ತುಂಬಿಸಿದರು ।
ಕುಸುಮನಾಭನ ದಯದಿ ವೃಂದಾವನದಿ ಪ್ರಕಾಶಿಸುತ ವೈಭವದಿ ಮೆರೆದರು ।೩।

ವೃಂದಾವನದಿ ಪೂರ್ಣಚಂದ್ರನಂತಿರೆ ಭಕ್ತವೃಂದಕ್ಕೆ ಅಭಿವೃದ್ಧಿ ಕೊಡುತಾ ।
ವಂದೇ ಮನದಿ ಅಭೀಷ್ಟೆಯ ನೀಡುತಲೆ ಸತ್ಯಸಂಧನಾಗಿಹ ಸುಪ್ರಖ್ಯಾತಾ ॥
ಮಂದ ನಾನು ನಿನ್ನ ಬಂಧುರ ಮಹಿಮೆಯ ಸಂದೋಹತಿಳಿಯಲಶಕ್ತಾ ।
ತಂದೆರಮಾಪತಿವಿಟ್ಠಲ ಸೇವಕನೇ ಮಾರ್ಕಾಂಡೇಯ ಮರುದಂಶ ಖ್ಯಾತಾ।೪।

೧೯. ರಾಗ – ಭೈರವ : ತಾಳ – ರೂಪಕತಾಳ

ನೋಡಿದೆ ಗುರುಗಳ ನೋಡಿದೆ ।ಪ।

ನೋಡಿದೆನು ಗುರುಗಳನು ವಂದನೆ ।

ಮಾಡಿದೆನು ಚರಣಾಬ್ಜದಲಿ ಕೊಂ ।
ಡಾಡಿದವರಿಗೆ ಬೇಡಿದ್ವರಗಳ ।
ನೀಡಿ ಪೊರೆಯುವ ಸತ್ಯಬೋಧರ ।ಅ ಪ।

ಸತ್ಯಪ್ರೀಯರ ಕರೆದು ಆಶ್ರಮ ।
ವಿತ್ತು ಶ್ರೀ ಮಾನಾಮಧುರೆಯಲಿ ।
ಉತ್ತರಾದಿ ಮಠಾಧಿ ಪೀಠವ
ಹತ್ತಿ ಸುರರಾಯನಂತಾಳ್ದರ ।೧।

ಹತ್ತು ಮತ್ತೊಂಬತ್ತು ವರುಷದಿ ।
ಸುತ್ತಿ ತೀರ್ಥ ಕ್ಷೇತ್ರಗಳ ಬಂ ।
ದಿತ್ತ ಸವಣೂರಲ್ಲಿ ತಾವಿ ।
ಪ್ಪತ್ತು ಮತ್ತೊಂದೊರುಷ ಮೆರೆದರ ।೨।

ಭೇದ ಮತವನೆ ಬೋಧಿಸುತ ದು ।
ರ್ವಾದಿಗಳ ನಿರ್ವಾದ ಮಾಡುತ ಸದಾ ।
ಬಾದರಾಯಣರಾಮ ಮೂರ್ತಿಯ ।
ಪಾದಪದ್ಮಗಳರಾಧಕರ ।೩।

ಗರಳ ಮಿಶ್ರವ ಮಾಡಿ ಪಾಕದೊಳಿರಿಸೆ ।
ಸೂದನು ಶ್ರೀಹರಿಗೆ ತಾವ್ ।
ಅರಪಿಸಿದ ನೈವೇದ್ಯ ಬಿಡೆವೆಂದರಿತು ।
ಅದನುಂಡರಗಿಸಿದ ಘನರ ।೪।

ತರ್ಕಿಸುತಲಿರೆ ರಾತ್ರಿ ಭೋಜನ ।
ವಕ್ರಯತಿಗಳಿವರೆಂದು ಕುಹಕರು ।
ಅರ್ಕನನು ರಾತ್ರಿಯಲಿ ತೋರಿದ ।
ಮಾರ್ಕಾಂಡೇಯಾಂಶಜರ ಮೂರ್ತಿಯ ನೋಡೆದೆ ।೫।

ಹೋಗಿ ಕಾಶಿಗೆ ಬರಲು ಯೋಚಿಸ ।
ಲಾಗಿ ತಾನೊಲಿದಿವರಿಗೋಸುಗ ।

ವಾಗಿ ಮತ್ತೀ ಮರದ ಬುಡದಲಿ ।
ಭಾಗೀರಥಿ ಮೈದೋರೆ ಮಿಂದರ । ೬ ।

ಸೊನ್ನಿ ರಾಮಾಚಾರ್ಯರಿಗೆ ।
ಮುಂದಿನ್ನ ಕೋಡಗ ಜನುಮ ಬಂದಿರೆ ।
ಮನ್ನಿಸುತೆ ಪ್ರಾರಬ್ಧ ಪರಿಹರ ।
ವನ್ನು ಗೈದಿಹ ಘನ್ನ ಮಹಿಮರ । ೭ ।

ಸತ್ಯಸಂದರೆನ್ನುತ್ತ ಆಶ್ರಮ ।
ವಿತ್ತು ಶಿಷ್ಯಗೆ ಆಯುವಿಲ್ಲದಿರೆ ।
ಮತ್ತೆ ಆಯುರ್ದಾನವನು ।
ಮಾಡುತ್ತ ಕಾಯ್ದ ಮಹಾತ್ಮುಮರನಾ । ೮ ।

ಬಂದು ಸೇವಿಪ ಸುಜನ ವೃಂದವ ।
ಹೊಂದಿ ಪೊರೆಯುತ ಸ್ವರ್ಣಪುರದಲಿ ।
ನಿಂದು ವೃಂದಾವನದಿ ಪೊರೆವ ಕ ।
ರ್ಮಂದಿಗಳ ಪಾದ ದ್ವಂದ ಕಮಲವ । ೯ ।

ಎಂತು ವರ್ಣಿಪೆ ಮಹ ಮಹಿಮೆಗಳ ।
ಸಂತತದಿ ಹನುಮೇಶವಿಟ್ಠಲನ ।
ಚಿಂತಿಸುವ ಏಕಾಂತ ಭಕುತರ ।
ಚಿಂತಿತಾರ್ಥವ ನೀವ ಗುರುಗಳ । । ೧೦ ।

೨೦. ರಾ ಗ – ಪೂ ರ್ವಿ : ತಾ ಳ – ಆ ದಿ ತಾ ಳ

ಸತ್ಯಬೋಧರಾಯಾ, ಪಾಲಿಸು ಭೃತ್ಯರ ನನ ಜೀಯಾ । ಪ ।

ಸತ್ಯಪ್ರಿಯರ ಸುಪುತ್ರನಾಗಿ ಪುರುಷೋತ್ತಮನೊಲಿಸಿದ ಸ್ತುತ್ಯಸುಕಾಯಾ । ಅ ಪ ।

ದೂರ ನೋಡದಲೆನ್ನ ।
ಗುರುವರ ಪಾರ ಗೈಪುದು ಮುನ್ನ ॥

ಶ್ರೀ ರಮಾರಮಣನಾರಾಧಕರೊಳು ।
ಧೀರ ನಿನಗೆ ಸರಿಯಾರಿಹರಯ್ಯ ।೧।

ಮತ್ತನಾಗಿಹೆ ನಾನು ಭವದಲಿ ।
ಸತ್ತು ಹುಟ್ಟುತಲಿಹೆನು ।
ಚಿತ್ತಕೆ ತರದಲೆ ಎನ್ನವಗುಣಗಳ ।
ಮತ್ತೆ ಕೈಪಿಡಿಯುತ ಲೆತ್ತು ಉದಾರಾ ।೨।

ಶರಣು ಶರಣು ದೊರೆಯೆ ।
ಕರುಣದಿ ಪೊರೆ ಧನ್ಯರನರಿಯೇ ॥
ಕರುಣಾಕರ ಶಿರಿ ಹನುಮನಯ್ಯನ ಪದ ।
ಚರಣಾಂಬುಜ ಮಧುಕರನಾಗಿರುತಿಹ ।೩।

೨೧. ರಾ ಗ – ಧ ನ್ಯಾ ಸಿ : ತಾ ಳ – ಅ ಟ ತಾ ಳ

ಶರಣು ಹೊಕ್ಕೆನು ನಿನ್ನ ।
ಚರಣ ಕಮಲಕ್ಕೆ ನಾ । ಗುರುಸುತ ಬೋಧರಾಯಾ ॥
ಕರುಣೆಗಳರಸನೆ ತರಳನ ಮೊರೆಕೇಳಿ ।
ಪೊರೆವುದು ಎನ್ನ ಜೀಯಾ ॥ ಗುರುರಾಯಾ ॥

ಬೇಡಿಕೊಳ್ಳಲು ಬಾಯಿಬಾರದೋ ನಾ ಹಿಂದೆ
ಮಾಡಿದಪರಾಧವ ॥
ನೋಡದೆ ಎನ್ನವಗುಣ ಕಯ್ಯಪಿಡಿದು ಕಾ ।
ಪಾಡಲು ನಿನಗೀಡೆ ॥ ದಯಮಾಡೆ ॥ ।೧।

ಪುಟ್ಟಿದ ಪುಟಕಿಕ್ಕಿದ ಚಿನ್ನದಂತಿಹ ।
ಶ್ರೇಷ್ಠ ವೈಷ್ಣವ ಕುಲದಿ ।
ಭ್ರಷ್ಟ ಮಾಡಿದೆ ಬಾಳು ಪೇಳಲೇನು ದಯ ।
ದೃಷ್ಟಿ ಇಡುವದೆನ್ನೊಳು । ದಯಾಳು ॥ ।೨।

ಮರುತ ಮತವ ನಂಬಿ ನಡೆವರ ಪದಧೂಳಿ ।

ಧರಿಸುವ ಭಾಗ್ಯವನೇ ॥
ಗುರುವರ್ಯಕರುಣಿಸು
ಹನುಮನಯ್ಯನ ಪಾದ ।
ಸುರಸಿಜ ಭೃಂಗಿ ನೀನು ॥ ಸುರಧೇನು ॥ ।೩।

೨೨. ರಾ ಗ – ಪೂ ರ್ವಿ : ತಾ ಳ – ಆ ದಿ ತಾ ಳ

ಸತ್ಯಬೋಧ ಸದ್ಗುರುವರ ಪಾಲಿಸು । ಭೃತ್ಯನೆಂದು ಎನ್ನ ॥
ಚಿತ್ರಜನಯ್ಯನ ತೆತ್ತಿಗರೊಳು ದಾಸೋತ್ತಮ ಸಂಪನ್ನ ।ಪ।

ಅರುಣೋದಯದಲ್ಲೆದ್ದು ಶ್ರೀಹರಿಯ, ಸ್ಮರಣೆಯನ್ನು ಮಾಡಿ ।
ಗುರುಪಾದುಕ ಪೂಜಿಸಿ ಮಂತ್ರಾಕ್ಷತೆ, ಶರಣರಿಗೇ ನೀಡೀ ॥
ತೆರಳಿ ಬಂದು ಘಟಕಾರ ಭಾವಿಯೊಳು ಸ್ನಾನಾಹ್ನೀಕ ಮಾಡಿ ।
ವರ ಆಸನದಲ್ಲಿರುತಿರಲು ಭೂಸುರರಿಂದೊಡಗೂಡಿ ಕೃಪೆಮಾಡಿ ।೧।

ಮನದಲಿ ಜನ್ಹುಮುನಿಯಸುತೆ ಸ್ನಾನವ ಮಾಡಬೇಕೆನುತಾ ।
ಮನಸಿಗೆ ಮರುತೌದಂಬರ ವೃಷದಿ, ಜನಿಸಿ ಗಂಗಾ ತಾ ಬರುತಾ ।
ಜನರೆಲ್ಲ ಪಾವನವಾಗಲು ಶ್ರಿಮುನಿಯ ಮೊದಲು ಮೀಯುತಾ ॥
ಅನುಭವವಿಂದಿಗೂ ಭಾಗೀರಥಿ ಪ್ರತ್ಯಕ್ಷ ಸ್ನಾತ ವಿಷ್ಣುತೀರ್ಥಾ ॥ಕೃತಾರ್ಥಾ॥।೨।

ಸ್ನಾನ ಮಾಡಿ ಆಸ್ಥಾನಕೆ ಬಂದು ವ್ಯಾಖ್ಯಾನವ ಹೇಳುತಲೀ ।
ಭಾನುಕುಲೇಶ ವ್ಯಾಸ ಸೀತಾಪತೆ ಸಾನುರಾಗದಲ್ಲಿ ॥
ನಾನಾವಿಧ ರಸಸುಭಕ್ಷ್ಯ ಭೋಜ್ಯಂಗಳ ನಿತ್ಯ ಅರ್ಪಿಸುತಲಿ ॥
ಜ್ಞಾನಿಗಳೊಡನೆ ಭೋಜನಗೈಯ್ವ ಸಂಭ್ರಮ ಏನು ವರ್ಣಿಸಲೀ ॥ಶಬ್ದದಲಿ॥ ।೩।

ದುರುಳರ ಭೋಧನೆಯಿಂದಾ ಗರಳ ಚೂರ್ಣ ತಂದು ॥
ಪರಮಾನ್ನದಿ ಹಾಕಿರಲು ನೈವೇದ್ಯವ ಹರಿಗರ್ಪಿಸಿ ಅಂದು ।
ಸರ್ವಜ್ಞರೆ ನೀವೆ ತಿಳಿದು ಶ್ರೀರಾಮನ ಕೊರಳ ಕಪ್ಪು ಕಂಡು ।
ಉರುತರ ವಿಷ ಹರ ದ್ವಾದಶ ಸ್ತೋತ್ರವ ಪಠಿಸಿ ಪೂಣವಂದೂ ॥
ಮನನೊಂದು ॥ ।೪।

ಅರರೇ ಪಾಚಕ ಸತ್ಯ ಪೇಳೆಂದು ಗದ್ದರಿಸೆ ಶಿರವ ಬಾಗಿ ।
ಪರಮ ಪಾತಕಿ ಪೇಳ್ದ ನಿಜವನು ಗರಳ ಬೆರೆಸಿದುದು ಸತ್ಯಯೋಗಿ ॥
ಅರಿತ ಕ್ಷಮಿಸ್ಯಾ ನೈವೇದ್ಯ ಭುಂಜಿಸಲು । ಶರೀರ ಬಾಧಿತವಾಗಿ ।
ಇರಳು ಹಗಲು ಮಾಡಿದರೆ ಸುಖವಹುದೆಂದರುಹೆ ವೈದ್ಯರು ಸಾಗೀ ॥
ಸಮನಾಗೀ ॥ । ೫ ।

ಸಿತಿಭೋಜನವೆಂದಸುರರು ನುಡಿಯಲು ಹಸನಾಗಿ ತಿಳಿಯೇ ।
ಅಸಮ ಮಹಿಮೆ ತೋರಿಸೆ ಚಂದ್ರಿಕ ಬಿಸಿಲಂತೆ ಪೊಳೆಯೇ ।
ವಸುಧಿ ಪಾಲಕ ಜನರೆಲ್ಲಾ ನೋಡಲು ಶಶಿ ಭಾಸ್ಕರ ನಿಲಯ ।
ಬೆಸಗೊಂಡರೆಲ್ಲರು ವಶವಾದರು ಮಾನಸದ ತಾಮಸ ಕಳೆಯೇ ॥
ಭ್ರಮವಳಿಯೇ ॥ । ೬ ।

ಸತ್ಯಪ್ರಿಯರ ಸುತ ಸತ್ತಿಗೆ ಮುತ್ತಿನಂದೋಲದಲ್ಲಿ ।
ಜತ್ತಾಗಿ ಕುಳಿತು ನೌಬತ್ತು ಕರಿಯಮೇಲಿತ್ತು ಹೊಯ್ಸುತಲಿ ॥
ತುತ್ತೂರಿ ಮೊದಲರವತ್ತು ವಾದ್ಯಗಳ ಎತ್ತಿ ಬಾರಿಸುತಲ್ಲಿ ॥
ಮಿಥ್ಯವಾದಿಗಳನೆತ್ತಿ ತಗ್ಗಿಸಿ ಮೆರೆವುತ್ತ ಬದಿರಲ್ಲಿ । ವೈಭವದಲ್ಲಿ ॥ । ೭ ।

ಈ ಪರಿ ಯಾವುದ್ದೇಶದಿ ಮಹಿಮಾ ವ್ಯಾಪಿಸಿ ಇರುತಿರಲು ।
ಶಾಪಾನುಗ್ರಹ ಶಕ್ತರು ಎಂದಾ ಆಪತ್ತಿಗರು ಬರಲು ।
ಪಾಪಿಗಳೆಲ್ಲರು ನಿಲ್ಲದೆ ಎದುರಿಗೆ ಗೌಪ್ಯದೊಳೋಡುತಿರಲು ।
ಕೋಪ ಮಾಡದಲೆ ಶರಣರ ಪೊರೆವದು ಸಂತಾಪ ಕಳೆಯುತಿರಲು ॥
ಹಗಲಿರುಳು ॥। ೮ ।

ಘನಚರಿತೆಗಳ ದಿನದಿನ ತೋರುತ ಸವಣೂರ ಪುರದೊಳಗೆ ॥
ಚಿನುಮಯ ತಾರೆ ಸೋಭನ ಸಂವತ್ಸರ ವದಿ ಫಾಲ್ಗುಣದೊಳಗೆ ॥
ಜನರಿಗೆ ತೋರಲು ಪ್ರತಿಪದೆ ಎಂಬ ಅಭಿನವ ಶುಭ ಮುಹೂರ್ತದೊಳಗೆ ।
ದಿನಕರನಂತೆ ತನುವಿಟ್ಟರು ವೃಂದಾವನದೊಳಗೆ ॥ ಯಶಬೆಳಗೆ ॥ । ೯ ।

ಪ್ರತಿದಿನಗೊಳ್ಳುವ ಪೂಜಾಸೋಪಸ್ಕಾರ ತುತಿಸಲು ಅಳವಲ್ಲ ॥
ನುತಿಪರಿಗೆ ಕಲ್ಪದ್ರುಮದಂತೆ ಕೊಡುವರು ಅತುಳ ಸಂಪದವೆಲ್ಲಾ ॥
ಮಿತಿ ಇಲ್ಲದೆ ಪ್ರತಿವರುಷ ವಿಪ್ರಸಂತತಿ ಭೋಜನಸೊಲ್ಲಾ ॥

ಅತಿಶಯ ಕೇಳ್ವುದುದ್ವಯಾ ನೀತಿಯ ಸಂವತ್ಸರ ಸಟಿಯಲ್ಲಾ ॥
ಹರಿಬಲ್ಲಾ ॥ । ೧೦ ।

ಕಲಕೃತ ಕಲ್ಮಷ ಬಹುದೂರ ಶ್ರೀ ತುಳಸಿ ನಳಿನಾಕ್ಷಸುಹಾರಾ ।
ಗಳದಲಿ ಧರಿಸಿದ ಅಲವಬೋಧರ ಮತ ಜಲಧಿಸದಾ ॥
ಸುಲಭದಿ ನರಸಿಂಹವಿಟ್ಠಾಲನುಗ್ರಹವನೆಲಸಿದ ಗಂಭೀರಾ ॥
ಹಲವು ಮಾತೇನು ನಿಮ್ಮವನೆಂದೆನ್ನನು ಮಾಡೋ ಉದ್ಧಾರಾ ॥
ಗುರುವರಾ ॥ । ೧೧ ।

೨೩. ರಾ ಗ – : ತಾ ಳ –

ಶ್ರೀ ಗುರು ಸತ್ಯಬೋ ।
ಧರ ಪದಯುಗವನುರಾಗದಿ ।
ಭಜಿಸಿ ಶುದ್ಧರಾಗುವಿರೋ । ಪ ।

ನವರಸ ಭರಿತ ಸಬಾ ।
ಸವಣೂರ ಪುರದಲ್ಲಿ
ಕವಿಜನ ಸಲಹುವರೋ । ನಿಂತಿಹರೋ । । ೧ ।

ನಿಶಿಯಲ್ಲಿ ಭೋಜನ ಮಾ ।
ನಶಿಕವೆನ್ನಲು ಜನಾ ।
ಬಿಶಿಜನೇತ್ರನಾ । ಬಿಂಬವ ತೋರಿರುವಾ । । ೨ ।

ಉತ್ತುಮ ಭಗೀರಥ ।
ಪುತ್ರಿಯ ನೊಲಿಸಿ ।
ಸಮರ್ಥರಾಗಿರುತಿಹರಾ । ಸುಂದರಾ । । ೩ ।

ವಾನರ ಪತಿ ಅಭಿಮಾನದಿ ।
ಬರಲು ನೀ ಬ್ಯಾಗದಿ ।
ನಿಲ್ಲಿಸುವಾ ನೋಡಿವರಾ । ೪ ।

ಪರತರ ಶಿರಿನರಹರಿ ।
ಹರಪುರಗರ ಸ್ಥಿರವಾಗಿ ।
ನಿಲ್ಲಿಸಿಹರಾ ॥ ನೋಡಿವರಾ ॥ । ೫ ।

೨೪. ರಾ ಗ – ಕೇ ದಾ ರ : ತಾ ಳ – ಝಂ ಪೆ ತಾ ಳ

ಸವಣೂರು ಪುರವಾಸ ತವಚರಣ ಭಜಿಸುವೆವು
ತವಕದಿಂ ಸಂಸಾರ । ಭವಣೆ ಬಿಡಿಸುವದೈ

ಧರೆಯೊಳಗೆ ಜೇಯವಾಗಿಯ ಮೃತ್ಯುವನು ಗೆಲಿದು ।
ಕುರುಹು ಮಾರ್ಕಾಂಡೇಯರೆಂಬುದು ತೋರಿ ।
ಗುರು ಸತ್ಯಬೋಧಾರ್ಯರೆಂಬ ನಾಮದಿ ಮೆರೆದ ।
ಪರಮ ಕರುಣಾಳು ನಿನ್ನಯ ಚರಣ ಭಜಿಪೆವೈ । ೧ ।

ಕಾಶಿಯಾತ್ರೆಯ ಮಾಡುವಾಯಾಸವನು ಬಿಡಿಸ ।
ಲೋಸುಗವೇ ಭಾಗೀರಥಿಯ ಬರಿಸಿದೆ ॥
ಕಾಸು ಖರ್ಚಿಲ್ಲದೆ ವಿಷ್ಣು ತೀರ್ಥದಿ ನಿನ್ನ
ದಾಸರೆಲ್ಲರು ಸ್ನಾನ ಮಾಡಿ ಹರ್ಷಿಪರೈ । ೨ ।

ಗರಳವನು ಭುಂಜಿಸಿದ ನೆವದಿಂದ ನೀ ಬರಿದೆ ।
ಇರುಳು ಹಗಲನು ಮಾಡಿ ದ್ವಿಜಗೆ ತೋರಿಸಿದೆ ।
ಹರಿಯೇ ಸರ್ವೋತ್ತಮನು ಎಂದು ಸಾರಿದ ನಿನ್ನ ।
ಹರಿದಾಸ ಸರ್ವೋತ್ತಮನು ನುತಿಸುತಿಹನು । ೩ ।

೨೫. ರಾ ಗ – : ತಾ ಳ –

ಭಜಿಸಿ ಬದುಕುವೆನು ಯತಿವರರಾಗಿಹ ।
ಗುರು ಸತ್ಯಬೋಧರ । ನಿಜಪದಕಮಲವ ।
ತ್ರಿಜಗದೊಡೆಯ ಶಿರಿ । ಗಜರಾಜ ವರದನೆ ।
ಭುಜಗ ಶಯನ ಹರಿಕಾಯೆನುತ ।
ಅಜಸುರ ವಂದ್ಯನೆ ಭಜಿಸಿ ನಿಶಿಯೊಳು ।

ಕಂಜಸಖನ ತೋರಿದಾಯೋಗಿ ವರ್ಯರ ನೀಗಾ ।ಪ।

ಸಾಗರ ಶಯನನೆ ಸರಸಿ ಸದ್ಗುಣ ನಿಗಮಾಗಮ ಗೋಚರ ನೀನೆನುತ ।
ಭಾಗೀರಥಿಯಳ ಆಗಮನವ ಕಂಡ ಆಗ ।
ತೋರಿದ ಯೋಗಿವರ್ಯರ ನೀಗಾ ।೧।

ಸೀತಾರಮಣನೆ ವರದಾತನೆ ಪ್ರೀತನೆ ವಾಯುಸುತನ ಪೊರೆದಾತನೆ ।
ನೀ ಧೊರೆಯನ್ನುತಲಿ ।
ಖ್ಯಾತಿಯೊಳ ವಿಷವಮೃತವ ಮಾಡುತ ಸ್ಮರತಾತನೆ ಸಲಹೆ
ನುತೀತೆರವಿರ್ಪರ ।೨।

ಕಡಲಶಯನ ಶಿರಿ ಉಡುಪಿ ಕೃಷ್ಣನೆನುತದಿಗದಿಗನು
ದಿನ ಧ್ಯಾನಿಸುತ ।
ಬಡವರ ಭೀಷ್ಟವ ಕೊಡುತ ಸವಣೂರೊಳು ಧೃಢವಾಗಿ
ನೆಲಸಿದ ಜಡವರನನ್ನು ।೩।

೨೬. ರಾ ಗ – ಬಿ ಲ ಹ ರಿ : ತಾ ಳ –

ಸತ್ಯಪ್ರೀಯರ ಪುತ್ರ, ಸ್ತುತ್ಯ ಚಾರಿತ್ರ ।
ಸತ್ಯಬೋಧ ಪವಿತ್ರ, ಭೃತ್ಯರ ಸುಕ್ಷೇತ್ರ ।ಪ।

ಕವಿವರ್ಯ ನೀವೆಂದು, ಯವನ ರಾಜನು ಬಂದು ।
ಸ್ತವರ ಗೈಯವು ನಿಂದು, ಸವನ ಪುರದಿ ॥
ತವ ಮಹಿಮೆ ಮೆರೆಸುತಲಿ, ಭುವನಬುಧ ಮೇಳದಲಿ ।
ಲಿಪಿನಾಶಿತ ಸುಕೀರ್ತಿ, ಯತಿಚಕ್ರವರ್ತಿ ।೧।

ಖಂಡೇರಾಯ ದಿವಾನ ಮಂಡೆ ಬಾಗಿದ ನಿಮ್ಮ । ಖಂಡವೈರಾಗ್ಯ
ಭಕ್ತಿಸುಜ್ಞಾನಕೆ । ಪಂಡಿತಪಾಮರರು ನಿಮ । ಕಂಡು ಉಧೃತ
ರಾಗಿ । ದಿಂಡುಗೆಡೆವರು ತಮ ಹಿಂಡು ಪಾಪಗಳ ।೨।

ಭಾಗೀರಥಿಯು ನಿಮ್ಮ । ಆಗಮನಶ್ರಮ ಬಳುಹೆ ।

ಸಾಗಿ ಬಂದಳು, ತಾನೇ ಸ್ವರ್ಗದಿಂದ ॥
ಯೋಗಿವರನಿಗೊಲಿದು, ಭಾಗವರಘವಳಿಯೇ ।
ಈಗೂ ನೆಲೆಸಿಹಳು ಚನ್ನಾಗಿ ವಿಷ್ಣು ತೀರ್ಥನಿಸಿ । ೩ ।

ಧೀರೇಂದ್ರ ವಿಷ್ಣುತೀರ್ಥರು ಜಗನ್ನಾಥದಾ ।
ಸಾರ್ಯರ ಸಹಿತ ವಾಸರಾಗಿ ವರದಾ ॥
ತೀರದಿ ತಪವ ಗೈದು ಸಾಧನಸ್ತ ಸಿದ್ಧಿಯಲಿ ।
ತೋರಿದರು ಸುರರಂತೆ ಈ ಧರೆಯ ಮೇಲೆ । ೪ ।

ಯಾವ್ ಸುರ ಋಷಿಗಳೋ । ಆ ಕಷೌವರರೋ ।
ದೇವ ಸುಖ ತೀರ್ಥ ಪೀಠದಿ ಶೋಭಿಸಿ ॥
ಭೂವರಹ ವ್ಯಾಸ ಶ್ರೀರಾಮ ಕಾಪಾಸರದಿ ।
ದೇವ ದೇವೇಶ ಶಿರಿವಿಟ್ಠಲನ ಪೊಂದಿಹರು । ೫ ।

೨೭. ರಾ ಗ – ಕೇ ದಾ ರ : ತಾ ಳ –

ಗುರು ಸತ್ಯಬೋಧರ ಚರಣಗಳಿಗಾ ನಮಿಪೆ ।
ನಿರುತ ಸನ್ಮಂಗಲವ, ಕರುಣಿಸಲಿ ಎಮಗೆಂದು । ಪ ।

ಗುರು ಅನುಗ್ರಹವು ಭವ ದುರಿತಹರ ಸುಖಪ್ರದವು ।
ಗುರು ಸ್ಮರಣೆ ಸದ್ಗತಿಗೆ ಉರು ಸಾಧನ ॥
ಗುರುಸೇವೆ ಗೈಯ್ಯೆ ಸರುವೇಷ್ಟಾರ್ಥ ಸಿದ್ಧಿಪವು ।
ಗುರು ಒಲಿಯೆ ಹರಿಯೊಲಿವ ಸುರರೇ ಸಾಕ್ಷಿದಕೆ । ೧ ।

ಗುರು ಕಾಯುವ ಸಮಕ್ಷ ಹರಿತೋರನು ಪ್ರತ್ಯಕ್ಷ
ಗುರು ದಯವು ಇಹದಲಿ, ಹರಿ ಕೃಪಾಪರದಲಿ ॥
ಗುರು ರುಷ್ಟನಾಗಲು ಹರಿ ನೋಡ ಕಣ್ಣೆತ್ತಿ ।
ಹರಿ ರುಷ್ಟನಾದರೂ ಗುರು ಕರವ ಪಿಡಿವದಕೆ । ೨ ।

ಹರ ಮೊದಲು ಸುರರೆಲ್ಲ, ಗುರು ಮುಖ್ಯ ಪ್ರಾಣರನು ।
ನೆರೆದು ಸೇವಿಸಿ ತಮ್ಮ ಸ್ಥಿರ ಪದಗಳ ॥

ಧರಿಸಿ ಜೋವರೊಳಿದ್ದು ನಿರುತ ತಮ ತತ್ವಕ್ರಿಯ ।
ಸರಿಗೈಯೆ ಹರಿಯದಯ, ದೊರಕಿ ಗತಿಗಾಣ್ಬದಕೆ ।೩।

ಗುರು ನಾರದರ ದಯದಿ ಹರಿಯ ಹಿರಿ ಭಕುತರು ।
ವರಧ್ರುವ ಪ್ರಹ್ಲಾದ, ಪುಣ್ಯ ಧರೆಯಾಣ್ಮರು ॥
ಪರಮೋಚ್ಛ ಪದವೈದಿ, ದರ ದಕೆ ಭೂಸುರರಿಲ್ಲ ।
ವರುಷ ಫಾಲ್ಗುಣ ವದ್ಯ ಸುರುವಿಗೆ ಬರಲು ಸೇವೆಗೆ ।೪।

ಸುಮನ ಗಂಗೆಯ ತರಿಸಿ ಅಮಿತ ವಿಷ ಭುಂಜಿಸಿ ।
ಉಮಾವರನ ಸತ್ಕರಿಸಿ ವೃಷ್ಟಿಗೈಸಿ ॥
ಸಮರಾತ್ರಿ ದಿವಗಳಲಿ ಕ್ರಮದಿ ಶಿರಿವಿಟ್ಠಲನ ಹೃ।
ತ್ಕಮಲದೀಕ್ಷಿಸುತಸದ, ಗಮಿಸಿದರು ಸ್ವಸ್ಥಳಕೆ ।೫।

೨೮. ರಾ ಗ – ಮಾ ಯಾ ಮಾ ಳ ವ ಗೌ ಳ : ತಾ ಳ –

ಸತ್ಯಬೋಧ ಗುರುವೇ, ನಿಮ್ಮ ಪಾದ ।
ನಿತ್ಯ ನುತಿಸಿ ಕೃತಕೃತ್ಯನಾಗಿ ಬಾಳುವೆ ।
ಭೃತ್ಯಜನರಿಗೆ ಜೀವೋತ್ತಮರ ಸುಶಾಸ್ತ್ರ
ಪೆತ್ತರಾಗಿ ಬೋಧಿಸಿರುತ್ತಮಾಧಿಕಾರದ ।ಪ।

ಯೋಗಿ ವರ್ಯನೆ ಮಹಾ, ಭಾಗವತರ ಪ್ರಿಯ ।
ಭಾಗವತಾದಿ ಶಾಸ್ತ್ರ ರಾಗಾಧ ಜ್ಞಾನಿಯೆ ॥
ಭೋಗಿಸುವ ಸಂಚಿತ, ಆಗಾಮಿ ನಿಷ್ಕರ್ಮ ।
ನೀಗುವವು ನಿಮ್ಮಸು, ಯೋಗ ವಾದಾಕ್ಷಣದಿ ।೧।

ಸುಖತೀರ್ಥರೊಲುಮೆಯ, ಸುಖಪ್ರಾರಬ್ಧ ಭೋಕ್ತನೆ ।
ಸಖನಾಗಿ ಸಜ್ಜನಿಗೆ ಮುಕುತಿ ಮಾರ್ಗ ತೋರಿದೆ ॥
ಸಕಲ ಭಾಗವತ ಧರ್ಮ ಪ್ರಕಟಗೈದು ಸತ್ಕರ್ಮ ।
ಶಕುತ ನಿಮ್ಮ ಪೊಗಳಲು ಬಕುತಿ ಸಾಲದೆನ್ನದು ।೨।

ಸುರರಾಜನಂತೆ ಭೂ, ಸುರಸಮೂಹವನಾಳ್ದೆ ।

ಹರಿದಾಸ ಶ್ರೇಷ್ಠರಿಂದ ವರಣಿಸಿಕೊಂಡ ಕವಿಯೇ ।
ಎರಡಿಪ್ಪತ್ತು ವರುಷ, ವರವ್ಯಾಸ ಶ್ರೀ ರಾಮ ।
ಸಿರಿಸಹಿತರ್ಚಿಸಿದೆ ಶಿರಿವಿಟ್ಠಲರ ಸೇರ್ದೆ ।೩।

೨೯. ರಾ ಗ – ಪೂ ರ್ವಿ : ತಾ ಳ –

ಮಂಗಳ ಗುರು ಸತ್ಯ ಬೋಧಗೆ, ನರ ।
ಸಿಂಗನ ವರಜಾತ ಕುವರನಿಗೆ ಜಯ ।ಪ।

ಹರಿಯಾಚಾರ್ಯರು ಪಿತಾಂಬಿಕಾ ಮಾತಾ ಕುವರಗೆ ।
ಸ್ಥಿರ ಜ್ಞಾನ ಭಕುತಿ ವಿರಕ್ತನಿಗೆ ॥
ಸುರರಂತೆ ಚರಿತೆ ತೋರಿದ ಪುಣ್ಯ ಪುರುಷಗೆ ।
ಗುರು ಸಖ ತೀರ್ಥರ ಮತೋದ್ಧಾರಗೆ ಜಯ ।೧।

ಕಾಶಿ ರಾಮೇಶ್ವರ ಯಾತ್ರೆಗಧಿಕ ಪುಣ್ಯ ।
ಈ ಸ್ವಾಮಿ ಪಾದ ದರ್ಶನದ ಫಲ ॥
ಭೂಸುರ ಜನುಮ ಸಾರ್ಥಕ ವಾಗ್ವದಿವರ ಸಂ ।
ತೋಷದಿ ಭಜಿಸೆ, ಭಕ್ತರಾಭೀಷ್ಟೆಗೆ ಜಯ ।೨।

ಎರಡಿಪ್ಪತ್ತು ವರುಷ, ಸುರಗುರುಗಳ ಪೀಠ ।
ಉರುವೈಭೋಗದಿ ಆಳಿ ಶತ ಷಷ್ಟಾಬ್ದಿ ॥
ವರ ವೃಂದಾವನದಿದ್ದು ಸ್ಥಿರ ಆರಾಧನೆಗೊಂಬ ।
ಧೊರೆ ಶಿರಿವಿಟ್ಠಲನ ಪುರವಾಸಗೆ ಜಯ ।೩।